DC-267
T-2-2

R No KRNN 12 — 3-4-74

ರಾಜ್ಯದಲ್ಲಿ ಸ್ವತಂತ್ರ ಸ್ವರ್ಣ ಮಹೋತ್ಸವ ಆಚರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ತ್ರೀ ಚಾರವಿರತ ಎಂ. ಎಸ್. ಕೃಷ್ಣರಾವ್ ಶ್ರೀ ಸ

ನೀರಿನ ದರ ಏರಿಕೆ ಆಗುವ ಸೂಚನೆ

ರಥೋತ್ಸವ

ಕಳಲೆ ಶ್ರೀ ಲಕ್ಷ್ಮೀಕಾಂತಸ್ವಾಮಿಯವರ ರಥೋತ್ಸವವು ತಾ॥ 1-4-74 ರಿಂದ ತಾ॥ 11 ರವರೆಗೆ ನಡೆಯುತ್ತದೆ

ರಾಮೋತ್ಸವ

ಮೈಸೂರು— ರಾಜೇಂದ್ರನಗರದ ಈಡಿಗರ ಸೇವಾ ಸಮಾಜದ ಶ್ರೀ ವೆಂಕಟೇಶ್ವರ ಭಜನಾ ಮಂದಿರದಲ್ಲಿ ತಾ॥ 1-4-74 ರಿಂದ ತಾ॥ 10 ರ ಪರ್ಯಂತ ಶ್ರೀ ರಾಮೋತ್ಸವವು ನಡೆಯುತ್ತದೆ.

ಶ್ರೀ ಎಫ್. ಕೆ ಇರಾನಿಯವರು ಮತ್ತೆ ಅಧ್ಯಕ್ಷರು

ಮೈಸೂರು– ಡೆಕ್ಕನ್ ಪರ್ವತಾರೋಹಣ ಸಂಸ್ಥೆಯ ಅಧಿಕಾರವರ್ಗ ಚುನಾವಣೆಯಲ್ಲಿ ಶ್ರೀ ಎಫ್. ಕೆ. ಇರಾನಿಯವರು ಮತ್ತೆ ಅಧ್ಯಕ್ಷರಾಗಿ ಆಯ್ಕೆಯಾದರು.

—

19 ನೇ ತೀರ್ಥಂಕರರಾದ ಮಲ್ಲೀದೇವ

ಶ್ವೇತಾಂಬರ ಸಂಪ್ರದಾಯದಂತೆ ಮಲ್ಲಿ ತೀರ್ಥಂಕರ ಹೆಂಗಸು; ಗಂಡಸಲ್ಲ. ಮಲ್ಲಿ ಹುಟ್ಟಿ ಹಳೆಯ ಸಾವಿರವರ್ಷಗಳಾಗುವ ವಯಸ್ಸು ಬರುತ್ತದೆ; ಆಕೆಯ ಸೌಂದರ್ಯವನ್ನು ಕಂಡುಕೇಳಿದ ಅನೇಕ ರಾಜಕುಮಾರರು ಕನ್ಯಾರ್ಥಿಯಾಗಿ ಮೇಲಿಂದ ಮೇಲೆ ದೂತರನ್ನು ಸಾಗುಡಕಸ್ಸನ್ನು ಬೀಡಿಕೆಗಳನ್ನೂ ಮಲ್ಲಿಯ ತಂದೆ ಕುಂಭ ಮಹಾರಾಜರಿಗೆ ಕಳುಹಿಸುತ್ತಾರೆ. ಆದರೆ ಅವನೇನು ಮಾಡಿಯಾನು? ಮಗಳಿಗೆ ಮದುವೆಯಲ್ಲಿ ಇಷ್ಟವಿಲ್ಲ ಒಬ್ಬೇ ಮಾತಿನಲ್ಲಿ ಮಲ್ಲಿಯನ್ನು ಪಡೆಯಲಾರೆವೆಂದು ನೆರೆದ ರಾಜಕುಮಾರರು ಮರಳಿ ಹೋದ ನಗರವನ್ನು ನುತ್ತಿಕೊಳ್ಳುತ್ತಾರೆ. (ಇಂಥದೇ ಸಂದರ್ಭಕ್ಕೆ ಕೆಲವು ಸ್ವಯಂವರ ಕಂಕಣವಿದ್ಯೆಯೂ ಏರ್ಪಟ್ಟಿದೆ) ಆ ಸಮಯದಲ್ಲಿ ಕುಂಭ ಮಹಾರಾಜನು ಮಗಳ ಬಳಿಗೆ ಬಂದು, ನಿನ್ನಿಂದ ಇಷ್ಟೆಲ್ಲ ಆಯಿತು, ಈಗೇನು ಮಾಡಲಿ! ಎಂದು ಕೊರಗಿನಿಂದ ಹೇಳುತ್ತಾನೆ ಆಗ ಮಲ್ಲಿ ಯುದ್ಧವನ್ನೆಲ್ಲಾ ನಿಲ್ಲಿಸುವಂತೆ ಅಪ್ಪಣೆ ಮಾಡಿ ರಾಜಕುಮಾರರನ್ನೆಲ್ಲಾ ಅರಮನೆಗೆ ಬರಮಾಡಿಕೊಳ್ಳುತ್ತಾಳೆ. ಆ ಸಮಯಕ್ಕೆ ಇರಲಿ ಎಂದು ಮಲ್ಲಿ ಒಂದು ಏರ್ಪಾಡು ಮಾಡಿದ್ದಳು. ಲೆಪ್ಪದಿಂದ ಮನೋಹರವಾದ ಪ್ರತಿಮೆಯೊಂದನ್ನು ಮಾಡಿ ಜಾಣ್ಣ ಬಳಿದು ಅದು ನುಡಿವ ಸಡಿವ ತೆರದಿಂದ ಕಂಗೊಳಿಸುವ ಭ್ರಾಂತಿಯನ್ನುಂಟು ಮಾಡುವಂತೆ ಮಾಡಿಸಿದ್ದಳು. ಅಡಕತಲೆಯ ಮೇಲೊಂದು ಮುಚ್ಚಳ. ಅದನ್ನು ತೆಗೆದು ಪ್ರತಿದಿನವೂ ಕಸ ಕಡ್ಡಿ ಎಂಜಲು ಮುಂತಾದ ಹೇಯ ವಸ್ತುಗಳನ್ನು ಕೊಂಚಕೊಂಚವಾಗಿ ಹಾಕುತ್ತಾ ಬಾಯನ್ನು ಮುಚ್ಚುತ್ತಿದ್ದಳು. ಈ ಪ್ರತಿಮೆಯ ಎದುರಿಗೆ ರಾಜಕುಮಾರರನ್ನು ನಿಲ್ಲಿಸಿ ಮಲ್ಲಿ ಮೆಲ್ಲನೆ ತಲೆಯ ಮೇಲಣ ಮುಚ್ಚಳ ತೆರೆದಳು. ಕೂಡಲೇ ಪುಷ್ಪಾಂಗಣವೆಲ್ಲಾ ದುರ್ಗಂಧ ತುಂಬಿ ರಾಜಕುಮಾರರೆಲ್ಲ ಹೇಸಿ ಮೂಗು ಮುಚ್ಚಿಕೊಂಡರು. ಆಗ ಮಲ್ಲಿ ಮುಂದೆ ನಿಂತು, ಈ ಪ್ರತಿಮೆ ನೋಡಲು ಎಷ್ಟು ಅಂದವಾಗಿದೆಯೋ ಅದರ ನಾತ ಅಷ್ಟೇ ಅಸಹನೀಯ; ಹಾಗೆಯೇ ನನ್ನ ಶರೀರವೂ ಸಹ ಮಜ್ಜೆ, ಮಾಂಸ, ಶುಕ್ಲ, ಶೋಣಿತಗಳಿಂದ ತುಂಬಿ ಹೇಯವಾಗಿದೆ; ಇದಕ್ಕಾಗಿ ಏಕೆ ಬಾಯ್ಬಿಡುವಿರಿ? ಎಂದು ಜಂಕಿಸಿ, ಏಡಿಸಿ, ಉಪದೇಶಗೈದು, ತಪಸ್ವಿಯಾಗಿ, ಕವರಾರಿ ವಿಶ್ವಾಸವನ್ನುಗೈದು, ನೊರ್ಪ್ಪಕ್ಕೆ ಹೋದಳು

— ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

ನೀರಾವರಿಗೆ ಹಣ

ಬೆಂಗಳೂರು— ಭಾರಿ ನೀರಾವರಿಗಳಿಗೆ ಹಣ ಒದಗಿಸಿಕೊಳ್ಳಲು ಉತ್ತಮತೆ ಲೆವಿ ಮತ್ತು ರೈತರಿಂದ ಮುಂಗಡಹಣ ಪಡೆವ ವಿಷಯ ಶಾಸನಸಭೆಯಲ್ಲಿ ತಿಳಿಸಲಾಯಿತು – ನೀರಿನ ದರ ಹೆಚ್ಚಿಸುವ ಸೂಚನೆಯೂ ತಿಳಿಸಲಾಯಿತು

★

ನಾಗರಹೊಳೆ ಅರಣ್ಯಧಾಮ

ಮೈಸೂರು— ನಾಗರಹೊಳೆ ಅರಣ್ಯಧಾಮಕ್ಕೆ ಭೇಟಿಕೊಟ್ಟಿದ್ದ ಪತ್ರಿಕೋದ್ಯಮಿಗಳಿಗೆ, ಅದು ಈಗಿರುವ 111 ಚದುರ ಮೈಲಿಯಿಂದ 218 ಮೈಲಿಗೆ ಈಬಿನಿ ದಡದವರೆಗೆ ವಿಸ್ತರಿಸಲಾಗುವದೆಂದೂ, ಬಂಡಿಪುರ ಧಾಮಕ್ಕೆ ಸಂಬಂಧಿಸಲಾಗುವದೆಂದೂ ಅಸಿಸ್ಟೆಂಟ್ ಕಾನ್ಸರ್ವೇಟರ್ ಶ್ರೀ ನಗರಪ್ಪಾಳ್ಳರವರು ತಿಳಿಸಿದರು – ಪ್ರವಾಸಿಗರ ಸಂಖ್ಯೆ ಕೆಲ್ಲತಿದು ಆದಾಯ ಹೆಚ್ಚಿಸಿಗುವಪನ್ನು ತಿಳಿಸಿದರು – ಅಲ್ಲಿ ಹುಲಿ, ಚಿರತೆ, ಮುಳ್ಳಹಂದಿ ಸೇರಿ ವಿವಿಧ ಪ್ರಾಣಿಗಳಿರುವುದೆಂದೂ ತಿಳಿಸಿದರು – ಅಲ್ಲಿ 12 ಹಾಡಿಗಳ ನಿವಾಸವಿದೆ.

ಕಂಪ್ಯೂಟರಿಂದ ಸಂಗೀತ!

ಪನವೆಹಲಿ— ಕಂಪ್ಯೂಟರಿಂದ ಪಿಟೀಲು ಕೊಳಲು, ವೈಯಲಿನ್ ವೀಣೆ ಮುತ್ತಾವುದನ್ನಾದರೂ ಬಾರಿಸಬಹುದೆಂದು ಕಾನ್ಪುರದ ಪ್ರೊ॥ ರಾಮಪ್ರಸನ್ನಾಂ ರವರು ಹೇಳಿದರು

ಕರ್ನಾಟಕದಿಂದ ಅಕ್ರಮಣವಿಲ್ಲ

ತಿರುವೇಂದ್ರಂ— ಕರ್ನಾಟಕವು ಮುಲಬಾಗಿಲಿನ ಕಡೆ ಸ್ವಲ್ಪ ಸ್ಥಳ ಅಕ್ರಮಣ ಮಾಡಿದೆ ಎಂಬ ಕಮ್ಯೂನಿಸ್ಟು ಸದಸ್ಯ ಶ್ರೀ ಕೃಷ್ಣಾಂಬರರ ಆಪಾದನೆಯನ್ನು ಶಾಸನಸಭೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ನಿರಾಕರಿಸಿದರು

★

ಬ್ರಾಹ್ಮಣ ಸಮ್ಮೇಳನ

ಮಂಗಳೂರು– ಜಿಲ್ಲಾ ಮಟ್ಟದ ಬ್ರಾಹ್ಮಣ ಸಮ್ಮೇಳನವು ತಾ॥ 21 ರಂದು ನಡೆಯಲಿದೆ.

★

ಸುಮಿತ್ರಾ ದೇಸಾಯಿ ದಸ್ತಗಿರಿ

ಪೂನಾ— ಕರ್ನಾಟಕದಿಂದ ಮಾಯವಾದ ಒಬ್ಬ ಮಂತ್ರಿ ರಾಜೀನಾಮೆಗೆ ಕಾರಣಳಾದ ಸುಮಿತ್ರ ದೇಸಾಯಿ ಲೋನನಾಲಾ ಕ್ಷೇವಲ್ಯಧಾಮ ಯೋಗಸಂಸ್ಥೆಯಲ್ಲಿನ ಅವಳ ಕೊಠಡಿಯನ್ನು ಬಿಡಲು ತಿರಸ್ಕರಿಸಿದ್ದರಿಂದ ದಸ್ತಗಿರಿ ಮಾಡಲ್ಪಟ್ಟಳು – ಇವಳು ಅಲ್ಲಿಯು ನಿವಾಸಿಗಳೊಳನೆ ದುರ್ನಡತೆ ವ್ಯಕ್ತ ಪಡಿಸಿದಳೆಂದೂ, ಖರ್ಚನ್ನು ಕೊಟ್ಟಿಲ್ಲವೆಂದೂ ಸಂಸ್ಥೆ ಅಧಿಕಾರಿಗಳು ಹೇಳಿದರು

★

ಪ್ರತಿಭಟನೆ

ಬಳ್ಳಾರಿ— ಒಬ್ಬ ಸರಕಾರಿ ನೌಕರನು ತನ್ನ ಕರ್ತವ್ಯ ನೆರವೇರಿಸುತ್ತಿರುವಾಗ ವಾರಂಟು ಇಲ್ಲದೆ, ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದೆ ದಸ್ತಗಿರಿ ಮಾಡಿದ್ದನ್ನು ಪ್ರತಿಭಟಿಸಿ, ಜಿಲ್ಲಾ ಕಚೇರಿ ನೌಕರರು ಪೋಲೀಸು ಸ್ಟೇಷನ್ನಿಗೆ ಮೆರವಣಿಗೆಯಲ್ಲಿ ಹೋದರು.

●

ಕಾರ್ಮಿಕ ಹುತಾತ್ಮತೆ

ದಾವಣಗೆರೆ— ಕಾರ್ಮಿಕ ಹುತಾತ್ಮತೆ ಸಂಬಂಧವಾಗಿ ಕಮ್ಯೂನಿಸ್ಟರ ಆಶ್ರಯದಲ್ಲಿ 10000 ಕಾರ್ಮಿಕರ ಮೆರವಣಿಗೆಯನ್ನು ಮುಖ್ಯಬೀದಿಗಳಲ್ಲಿ ನಡೆಸಲಾಯಿತು.

ಯುವಕ ಕಾಂಗ್ರೆಸ್‌ನವರ ಒತ್ತಾಯ

ನವದೆಹಲಿ— ಕಾಂಗ್ರೆಸ್ ಪಾರ್ಟಿಯ ಯುವಕ ಶಾಖೆಯಾದ ಭಾರತ ಯುವಕ ಕಾಂಗ್ರೆಸಿಗರು, ಕಾಂಗ್ರೆಸ್ ಅಧ್ಯಕ್ಷ ಡಾ|| ಶರ್ಮಾರನ್ನು, ದೇಶದಲ್ಲಿಯ ತೀವ್ರ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಚರ್ಚಿಸಿ, ಈ ಬಗ್ಗೆ ಕಾಂಗ್ರೆಸ್ ಪಾರ್ಟಿಯು ಪೋಷಿಸಿರುವ ನೀತಿಯ ಸ್ಥಿತಿಗತಿ ಪರಿಶೀಲಿಸಲು ಕ್ಷಿಪ್ರದಲ್ಲೇ ಎ ಐ ಸಿ ಸಿ ವಿಶೇಷ ಅಧಿವೇಶನ ಕರೆಸಲು ಒತ್ತಾಯ ಮಾಡಿದ್ದಾರೆ.

— —

ಸಾಮೂಹಿಕ ಪೋಲೀಸರ ಸಸ್ಪೆಂಡು

ಲಕ್ನೌ— ಅಚಟನಗರ ಗ್ರಾಮದಲ್ಲಿ 300 ಸವರ್ಣ ಹಿಂದೂಗಳು ಹರಿಜನರ ಮೇಲೆ ಧಾಳಿ ನಡೆಸಿದ ಸಂದರ್ಭದಲ್ಲಿ ಪೋಲೀಸರು ಸೂಕ್ತ ರಕ್ಷಣೆ ನೀಡಲು ಅಲಕ್ಷ್ಯ ತಿಂದಿದ್ದಕ್ಕಾಗಿ ಎಕ್ಕಾತೋರ್ ಪೋಲೀಸು ಸ್ಟೇಷನ್ನಿನಲ್ಲಿಯ ಎಲ್ಲಾ ಪೋಲೀಸರನ್ನೂ ಸಸ್ಪೆಂಡು ಮಾಡಿರುವರು.

ರಾಜಾರೋಷ

ನವದೆಹಲಿ — ರಾಜಕೀಯ ಪಕ್ಷಗಳಿಗೆ ಕಂಪೆನಿಗಳು ಧನಸಹಾಯ ಮಾಡುವುದನ್ನು ಪ್ರತಿಬಂಧಿಸಿರುವದು ಹೋಗಬೇಕೆಂದೂ ಅವುಗಳು ಬಹಿರಂಗವಾಗಿ ತಮಗೆ ಬೇಕಾದ ಪಕ್ಷಗಳಿಗೆ ಕೊಡಲು ಅವಕಾಶವಿರುವಂತೆ ಶಾಸನದಲ್ಲಿ ತಿದ್ದುಪಡಿಯಾಗ ಬೇಕೆಂದೂ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಚಂದ್ರಜಿತ್ ಯಾದವ್ ಹೇಳಿದರು.

ಸೆಷನ್ ಜಡ್ಜರುಗಳಿಗೆ ಸನ್ಮಾನ

ಬೆಳಗಾಂ— ಸೆಷನ್ ಕೋರ್ಟುಗಳಲ್ಲಿ ಎಲ್ಲ ಮೊಖದ್ದಮೆಗಳೂ ಮುಗಿಸಲ್ಪಟ್ಟದ್ದು ಏಪ್ರಿಲ್ 1 ರಂದು ಮೂರು ಸೆಷನ್ ಕೋರ್ಟುಗಳಲ್ಲಿಯೂ ಒಂದು ಮೊಖದ್ದಮೆಯೂ ಇರಲಿಲ್ಲ — ವಕೀಲ ಸಂಘದವರು ಜಡ್ಜರುಗಳನ್ನು ಸನ್ಮಾನಿಸಿದರು.

ವುಡ್‌ಲಾಂಡ್ 29 3 74 ರಿಂದ

ಅವೋಘ ಆರಂಭ

ರಿ ಕ್ ಷಾ ವಾ ಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಳವಿಕ

ದಿನ 3 ಪ್ರದರ್ಶನಗಳು

ಅಪೆರಾ 4 4 74 ರಿಂದ

ನೈನ

ಅವೋಘ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಪಾತ್ರ – ಶತ್ರುಘ್ನಸಿನ್ಹಾ ಮೌಸಮಿ ಚಟರ್ಜಿ ಸಂಗೀತ – ಶಂಕರ್ ಜೈಕಿಶನ್

ದಿನ 3 ಪ್ರದರ್ಶನಗಳು

SHANTI SUDHA

A Superb Tonic

Contribute Liberally
to the National Defence Fund

Quality Printing Neat Binding

Lakshminarasimha Press

Sivarampet, Mysore 1

ಭಾರತದಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Help The Gorakshana

— Humanitarian Propaganda Monthly —

Edited Printed and Published by Dharmaprachaaniratha M S Krishna Rao (Proprietor) at the Satvvadi Press, Chamarajapuram Mysore